ಕರ್ನಾಟಕ ಸರ್ಕಾರ

ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆ

(ವಿಶೇಷ ಕೋಶ)

**ವಿಷಯ:** ವಿಶೇಷ ಅಭಿವೃದ್ಧಿ ಯೋಜನೆ 2010-11 ರ ಅನುಷ್ಠಾನ ಕುರಿತ ಮಾರ್ಗಸೂಚಿಗಳು.

* * *

2010-11 ರಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ವಿವಿಧ ವಲಯಗಳಿಗೆ 2584 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಕಳೆದ ವರ್ಷದಂತೆ ಈ ವರ್ಷದಲ್ಲಿಯೂ ಸಹ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿ ಸಂಬಂಧಪಟ್ಟ ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳ ಅನುಮೋದನೆಗಾಗಿ ಯೋಜನಾ ಇಲಾಖೆಗೆ ಕಳುಹಿಸಬೇಕಾಗಿದೆ.

**ವಿಶೇಷ ಅಭಿವೃದ್ಧಿ ಯೋಜನೆಯಡಿ ಸಂಪನ್ಮೂಲ ಹಂಚಿಕೆ:**

2007-08ನೇ ಸಾಲಿನಲ್ಲಿ ಪ್ರಕಟಿಸಿರುವ 8 ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯ ಚಿತ್ರಣ ಎಂಬ ದಸ್ತಾವೇಜಿನಲ್ಲಿ ಯೋಜನೆಗಳಿಗೆ ಒದಗಿಸಿದ ಹಣವನ್ನು ಅತ್ಯಂತ ಹಿಂದುಳಿದ, ಅತೀ ಹಿಂದುಳಿದ ಹಾಗೂ ಹಿಂದುಳಿದ ತಾಲೂಕುಗಳಿಗೆ 50:30:20 ರ ಅನುಪಾತದಲ್ಲಿ ಹಂಚಿಕೆ ಮಾಡಲು ಪ್ರಸ್ತಾಪಿಸಲಾಗಿತ್ತು. ಅವಿಭಾಜ್ಯ ಸ್ವರೂಪವುಳ್ಳ ಕೆಲವೊಂದು ಯೋಜನೆಗಳಿಗೆ ಸಂಪನ್ಮೂಲ ಹಂಚುವಾಗ ಇಲಾಖೆಗಳಿಗೆ ಮೇಲೆ ನಮೂದಿಸಿರುವ ಅನುಪಾತವನ್ನು ಅನುಸರಿಸಲು ಕೆಲವು ತೊಂದರೆಗಳು/ಅಡೆತಡೆಗಳು ಉಂಟಾಗಿವೆ. ಈ ಹಿನ್ನೆಲೆಯಲ್ಲಿ ಅತ್ಯಂತ ಹಿಂದುಳಿದ, ಅತೀ ಹಿಂದುಳಿದ ಹಾಗೂ ಹಿಂದುಳಿದ ತಾಲ್ಲೂಕುಗಳಿಗೆ 50:30:20ರ ಅನುಪಾತವನ್ನು ಅನುಸರಿಸಲು ಸಾಧ್ಯವಾಗಿರುವುದಿಲ್ಲ. ಆದುದರಿಂದ 2008-09 ಹಾಗೂ ನಂತರದಿಂದ ವಿಶೇಷ ಅಭಿವೃದ್ಧಿ ಯೋಜನೆಯಡಿ ಸಂಪನ್ಮೂಲ ಹಂಚುವಾಗ ಪ್ರಾದೇಶಿಕ ಅಸಮತೋಲನೆ ನಿವಾರಿಸಲು ರಚಿಸಲಾಗಿದ್ದ ಉನ್ನತ ಮಟ್ಟದ ಸಮಿತಿಯ ಶಿಫಾರಸ್ಸಿನಂತೆ ಒಟ್ಟು ಸಂಪನ್ಮೂಲವನ್ನು ರಾಜ್ಯದ 4 ವಿಭಾಗಗಳಾದ ಗುಲ್ಬರ್ಗಾ, ಬೆಂಗಳೂರು, ಬೆಳಗಾವಿ ಮತ್ತು ಮೈಸೂರು ವಿಭಾಗಗಳಲ್ಲಿ 40:25:20:15 ರ ಅನುಪಾತದಲ್ಲಿ ವಿಭಾಗಗಳ ಸಂಚಿತ ದುಸ್ಥಿತಿ ಸೂಚ್ಯಂಕಗಳನ್ನಾಧರಿಸಿ (Cummulative Deprivation Index=CDI) ವಿತರಿಸಲು ನಿರ್ಧರಿಸಲಾಗಿದೆ (ತ:ಪ್ತೆ-1 ನ್ನು ನೋಡುವುದು). ಇದಾದ ಮೇಲೆ ವಿಭಾಗಕ್ಕೆ ಹಂಚಿಕೆ ಮಾಡಲಾದ ಸಂಪನ್ಮೂಲವನ್ನು ವಿಭಾಗದಲ್ಲಿನ ತಾಲೂಕುಗಳಿಗೆ ಅಲ್ಲಿರುವ

ಅತ್ಯಂತ ಹಿಂದುಳಿದ, ಅತಿ ಹಿಂದುಳಿದ ಹಾಗೂ ಹಿಂದುಳಿದ ತಾಲುಕುಗಳಿಗೆ ಅನುಕ್ರಮವಾಗಿ ಅವುಗಳ ದುಸ್ತಿತಿ ಸೂಚ್ಯಂಕವನ್ನಾಧರಿಸಿ ಹಂಚಬೇಕಾಗಿದೆ. ಯೋಜನೆಯ ಸ್ವರೂಪವು ಭಿನ್ನವಾದ ಪಕ್ಷದಲ್ಲಿ ಇದು ಸಾಧ್ಯವಾಗದಿದ್ದಲ್ಲಿ ಸಂಪನ್ಮೂಲವನ್ನು ಯೋಜನೆಯ ಸ್ವರೂಪವನ್ನಾಧರಿಸಿ ವಿತರಿಸುವುದು. ವಲಯವಾರು ಒದಗಿಸಿದ ಹಣವನ್ನು ಮೇಲ್ ತಿಳಿಸಿರುವಂತೆ ರಾಜ್ಯದ 4 ವಿಭಾಗಗಳಾದ ಗುಲ್ಬರ್ಗಾ, ಬೆಂಗಳೂರು, ಬೆಳಗಾವಿ ಮತ್ತು ಮೈಸೂರು ವಿಭಾಗಗಳಿಗೆ 40:25:20:15 ರ ಅನುಪಾತದಲ್ಲಿ ಯೋಜನೆಗಳ ಭಿನ್ನ ಸ್ವರೂಪದಿಂದ ಒಂದೇ ಆರ್ಥಿಕ ವರ್ಷದಲ್ಲಿ ಒದಗಿಸಲು ಸಾಧ್ಯವಾಗದ ಪಕ್ಷದಲ್ಲಿ ಇಲಾಖೆ ಗಳು ಒಟ್ಟಾರೆ ಒದಗಿಸಬೇಕಾದ ಆಯವ್ಯಯವನ್ನು 8 ವರ್ಷಗಳ ಕಾಲಾವಧಿಯಲ್ಲಿ ಒಟ್ಟಾರೆ ನಿಗದಿಪಡಿಸಿದ ಅನುಪಾತ ಸರಿದೂಗುವಂತೆ ಖಚಿತಪಡಿಸುವುದು. ಇಲಾಖೆಗಳ ವಲಯವಾರು/ವಾರ್ಷಿಕ ಕ್ರಿಯಾ ಯೋಜನೆಗಳನ್ನು ಮೇಲೆ ತಿಳಿಸಿರುವ ಸಂಪನ್ಮೂಲ ಹಂಚಿಕೆಯ ವಿಭಾಗವಾರು ಅನುಪಾತವನ್ನು ಅನುಸರಿಸಿದ ಬಗ್ಗೆ ಯೋಜನಾ ಇಲಾಖೆಯು ಪರಿವೀಕ್ಷಣೆ ಮಾಡುವುದು.

**ತ:ಖ್ತೆ-1**

ಸಂಚಿತ ದುಸ್ಥಿತಿ ಸೂಚ್ಯಂಕವನ್ನಾಧರಿಸಿ (CDI)* ಸಂಪನ್ಮೂಲ ಹಂಚಿಕೆ

| ವಿಭಾಗ | ದುಸ್ತಿತಿ ಸೂಚ್ಯಂಕ | ಶೇಕಡಾವಾರು ಸಂಪನ್ಮೂಲ ಹಂಚಿಕೆ |
|---|---|---|
| ಗುಲ್ಬರ್ಗಾ | 8.06 | 40.00% (=8.06/20.26) |
| ಬೆಳಗಾಂ | 4.12 | 20.00% (=4.12/20.26) |
| ಬೆಂಗಳೂರು | 5.32 | 25.00% (=5.32/20.26) |
| ಮೈಸೂರು | 2.76 | 15.00% (=2.76/20.26) |
| ಒಟ್ಟು | 20.26 | |

(*Cumulative Deprivation Index)

ಇಲಾಖೆಗಳು ಪ್ರತಿ ವಿಭಾಗಕ್ಕೆ ಸಂಪನ್ಮೂಲ ಹಂಚಿಕೆಯನ್ನು ವಿಭಾಗಗಳ ದುಸ್ತಿತಿ ಸೂಚ್ಯಂಕ ಗಳನ್ನಾಧರಿಸಿ ಮಾಡಬೇಕು. ಒಟ್ಟಾರೆ ಯೋಜನೆಯಲ್ಲಿ ಒದಗಿಸಲಾದ ಹಣವನ್ನು ಆಯಾ ವಿಭಾಗದ ಶೇಕಡಾವಾರು ಅನುಪಾತಕ್ಕೆ ಗುಣಿಸುವ ಮೂಲಕ ಆ ವಿಭಾಗಕ್ಕೆ ಸಂಪನ್ಮೂಲ ಹಂಚುವುದು. ಇದನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

| |
|---|
| ಇಲಾಖೆಗೆ ಒಟ್ಟಾರೆ ಒದಗಿಸಿದ ಹಣ X 0.40=ಗುಲಬರ್ಗಾ ವಿಭಾಗದ ಆಯವ್ಯಯ |
| ಇಲಾಖೆಗೆ ಒಟ್ಟಾರೆ ಒದಗಿಸಿದ ಹಣ X 0.20=ಬೆಳಗಾಂ ವಿಭಾಗದ ಆಯವ್ಯಯ |
| ಇಲಾಖೆಗೆ ಒಟ್ಟಾರೆ ಒದಗಿಸಿದ ಹಣ X 0.25=ಬೆಂಗಳೂರು ವಿಭಾಗದ ಆಯವ್ಯಯ |
| ಇಲಾಖೆಗೆ ಒಟ್ಟಾರೆ ಒದಗಿಸಿದ ಹಣ X 0.15=ಮೈಸೂರು ವಿಭಾಗದ ಆಯವ್ಯಯ |

ವಿಭಾಗದೊಳಗಿನ ಸಂಪನ್ಮೂಲ ಹಂಚಿಕೆಯನ್ನು ಯೋಜನೆಗಳ ಸ್ವರೂಪವನ್ನು ಮಾರ್ಗಸೂಚಿಗಳನ್ನಾಗಿಸಿ ಅತ್ಯಂತ ಹಿಂದುಳಿದ, ಅತೀ ಹಿಂದುಳಿದ ಹಾಗೂ ಹಿಂದುಳಿದ ತಾಲೂಕುಗಳಲ್ಲಿ ಅನುಷ್ಠಾನಗೊಳಿಸಬೇಕಾದ ಯೋಜನೆಗಳಿಗೆ ಆಯಾ ತಾಲೂಕುಗಳ ದುಸ್ಥಿತಿ ಸೂಚ್ಯಂಕಗಳನುಸಾರ ಮಾಡುವುದು. ಆದಾಗ್ಯೂ ಆಯವ್ಯಯವನ್ನು ವ್ಯಾವಹಾರಿಕವಾಗಿ ಪ್ರಯೋಜನಕರವಾಗುವತ್ತ ಹಾಗೂ ಸೂತ್ರಬದ್ಧವಾಗಿ ವಿವಿಧ ಮೂಲಭೂತ ಸೌಕರ್ಯದ ಕೊರತೆಯತ್ತ ಗಮನವಿಟ್ಟುಕೊಂಡು ಒದಗಿಸುವುದು.

**ಅನುಮೋದನೆಯ ಕಾಲಮಿತಿ:**

ಇಲಾಖೆಗಳು ತಮ್ಮ ಇಲಾಖೆಯ ವಿಶೇಷ ಅಭಿವೃದ್ಧಿ ಯೋಜನೆಯ ಕ್ರಿಯಾ ಯೋಜನೆಗಳನ್ನು ಯೋಜನಾ ಇಲಾಖೆಯ ಅನುಮೋದನೆಯನ್ನು ಮೇ 2010 ರ ಅಂತ್ಯದೊಳಗೆ ಪಡೆಯುವುದು.

RIDF ನಬಾರ್ಡ್ ಯೋಜನೆಯಲ್ಲಿ ಪ್ರಸ್ತಾಪಿಸಿದ ಯೋಜನೆಗಳ ಅನುಮೋದನೆಯನ್ನು ಆರ್ಥಿಕ ಇಲಾಖೆಯ ಸಾಂಸ್ಥಿಕ ಹಣಕಾಸು ಶಾಖೆಯಿಂದ ಜೂನ್ 2010 ರೊಳಗೆ ಪಡೆಯುವುದು.

**ವಿಶೇಷ ಅಭಿವೃದ್ಧಿ ಯೋಜನೆಯ ಉಸ್ತುವಾರಿ:**

ವಿಶೇಷ ಅಭಿವೃದ್ಧಿ ಯೋಜನೆಯಡಿ ಯೋಜನಾ ಕಾರ್ಯಕ್ರಮಗಳ ಅನುಮೋದನೆ ಪಡೆದ ನಂತರ ಇಲಾಖೆಗಳು ಅನುಷ್ಠಾನಗೊಳಿಸಲಾದ ಕಾರ್ಯಕ್ರಮಗಳ ಮಾಸಿಕ ಪ್ರಗತಿಯನ್ನು (ಪ್ರತಿ ತಿಂಗಳು) ತಪ್ಪದೇ ಯೋಜನಾ ಇಲಾಖೆಗೆ ಕಳುಹಿಸುವುದು.

ಈ ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸುವಲ್ಲಿ ಏನಾದರೂ ಸ್ಪಷ್ಟೀಕರಣ ಬೇಕಾದಲ್ಲಿ ಯೋಜನಾ ಇಲಾಖೆಯ ವಿಶೇಷ ಕೋಶದಿಂದ (ದೂರವಾಣಿ : 22032470 ಅಥವಾ 22257336) ಪಡೆಯುವುದು.